ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ
## ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/01/2015-16** 23/05/16

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

ವಾದಿಗಳು

1) ಶ್ರೀ ಹೇಮಾನಾಯ್ಕ
ತಂದೆ ಸೂರ್ಯಾನಾಯ್ಕ
ಜಿ.ಕೋಡಿಹಳ್ಳಿ
2) ಶ್ರೀ ಕೊಟ್ರೇಶ್ ಎಸ್.ಶೆಟ್ಟರ್
ನ್ಯಾಯವಾದಿಗಳು
ಹಗರಿಬೊಮ್ಮನಹಳ್ಳಿ.
3) ಶ್ರೀ ಯು. ಕೊಟ್ರೇಶ್,
ನ್ಯಾಯವಾದಿಗಳು, ಹಗರಿಬೊಮ್ಮನಹಳ್ಳಿ.

ಪ್ರತಿವಾದಿಗಳು

1) ಶ್ರೀಮತಿ ಯಮನವ್ವ
ಗಂಡ ರಾಮಚಂದ್ರನಾಯ್ಕ
ಬಸರಕೋಡುತಾಂಡ

---

ವಿಷಯ : - **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 95/1 ವಿಸ್ತೀರ್ಣ 3-47 ಎಕರೆ ಜಮೀನು ಪವತಿ ಹಕ್ಕು ಬದಲಾವಣೆ ಕುರಿತು ತಕರಾರು -ವಿಚಾರಣೆ.**

---

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 95/1 ವಿಸ್ತೀರ್ಣ 3-47 ಎಕರೆ ಜಮೀನನ್ನು ವಾದಿಯು ಪವತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಳ್ಳಲು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರಕ್ಕೆ ಅರ್ಜಿ ಮಾಡಿಕೊಂಡಿರುತ್ತಾರೆ. ಅರ್ಜಿಯ ಪ್ರಕಾರ ಭೂಮಿಕೇಂದ್ರದಲ್ಲಿ ಹಕ್ಕು ಬದಲಾವಣೆಗೆ ಸಂಬಂಧಿಸಿದ ವಹಿವಾಟು ಸಂಖ್ಯೆ 194 ಹಾಗೂ ಹಕ್ಕು ಬದಲವಣೆ ಸಂಖ್ಯೆ ಹೆಚ್-110/2015-16 ರಂತೆ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರಿಂದ ಗ್ರಾಮ ಲೆಕ್ಕಾಧಿಕಾರಿ ಜಿ.ಕೋಡಿಹಳ್ಳಿ ಇವರ ದ್ವಾರ ನೋಟೀಸು ನಮೂನೆ 12 ಹಾಗೂ ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಪ್ರತಿವಾದಿಗಳಿಂದ ಭೂಮಿಕೇಂದ್ರದಲ್ಲಿನ ತಕರಾರು ಸ್ವೀಕೃತಿ ಸಂಖ್ಯೆ 6053/2014-15 ರಂತೆ ತಕರಾರು ಸಲ್ಲಿಸಿರುತ್ತಾರೆ. ಹಾಗೂ ಗ್ರಾಮ ಲೆಕ್ಕಾಧಿಕಾರಿ ಜಿ.ಕೋಡಿಹಳ್ಳಿ ಇವರು ನೋಟೀಸು ಜಾರಿ ಮಾಡಲಾಗಿ ತಕರಾರು ಇರುವುದಾಗಿಯೂ ಮತ್ತು ವಾದಿಗೆ ಐದು ಜನ ಮಕ್ಕಳು

ಇರುವುದಾಗಿಯೂ ವಾದಿಯು ವಂಶವೃಕ್ಷದಲ್ಲಿ ತಪ್ಪು ಮಾಹಿತಿ ನೀಡಿರುವುದಾಗಿ ವರದಿ ಮಾಡಿರುತ್ತಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ಪ್ರಕರಣದ ವಿಚಾರಣೆಯನ್ನು ದಿನಾಂಕ: 05-05-2015 ರಿಂದ ದಿನಾಂಕ: 23-05-2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ಪ್ರಥಮವಾಗಿ ಶ್ರೀ ಎಸ್.ಕೊಟ್ರೇಶ್ ಶೆಟ್ಟರ್ ಹಾಗೂ ನಂತರ ಯು.ಕೊಟ್ರೇಶ್ ನ್ಯಾಯವಾದಿಗಳು ವಾದಿಯ ಪರವಾಗಿ ವಕಾಲತ್ ವಹಿಸಿಕೊಂಡಿದ್ದು ಪ್ರತಿವಾದಿಯ ಪರವಾಗಿ ನ್ಯಾಯವಾದಿಗಳು ಇರುವುದಿಲ್ಲ.

ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಜಮೀನು ಹಾಲಿ ಲೆಕ್ಕ ದಾಖಲು 95/1 ಪೈಕಿ 3-47 ಎಕರೆ ಶ್ರೀಮತಿ ಗುಜರಿಬಾಯಿ ಗಂಡ ಎಲ್.ಸೂರ್ಯಾನಾಯ್ಕ ಎಂದಿದ್ದು ಇವರು ದಿನಾಂಕ: 13-11-2014 ರಂದು ಮರಣ ಹೊಂದಿರುವುದರಿಂದ ವಾದಿಯು ಪವತಿ ಹಕ್ಕು ಬದಲಾವಣೆಗಾಗಿ ಅರ್ಜಿ ಮಾಡಿಕೊಂಡಿರುತ್ತಾರೆ. ಅರ್ಜಿಗೆ ಸಂಬಂಧಿಸಿದ ವಂಶವೃಕ್ಷ ಪರಿಶೀಲಿಸಲಾಗಿ ದಿನಾಂಕ:3-8-2010 ರಂದು ನೀಡಿರುವ ವಂಶವೃಕ್ಷದಲ್ಲಿ ಐದು ಜನ ಮಕ್ಕಳಿರುವುದಾಗಿ ವಂಶವೃಕ್ಷ ಪಡೆದಿರುತ್ತಾರೆ. ಮತ್ತು ದಿನಾಂಕ: 27-1-2015 ರಂದು ಮತ್ತೊಂದು ವಂಶವೃಕ್ಷ ಪಡೆಯುತ್ತ ಇದರಲ್ಲಿ ಒಬ್ಬನೇ ಮಗ (ವಾದಿ) ಇರುವುದಾಗಿ ವಂಶವೃಕ್ಷ ಪಡೆದಿರುವುದು ಕಂಡು ಬರುತ್ತದೆ. ಹೀಗಾಗಿ ವಾದಿಯು ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿರುವುದು ಕಂಡು ಬರುತ್ತದೆ ಹಾಗೂ ವಂಶವೃಕ್ಷವು ಹೊಸಪೇಟೆ ತಾಲೂಕು ಕಮಲಾಪುರ ಗ್ರಾಮದಿಂದ ಪಡೆದಿರುವುದು ದಾಖಲೆಯಿಂದ ಕಂಡು ಬರುತ್ತದೆ. ಹಾಗು ಮರಣ ಪತ್ರಗಳನ್ನು ಪರಿಶೀಲಿಸಲಾಗಿ ಪಟ್ಟಣ ಪಂಚಾಯ್ತಿ ಕಮಲಾಪುರದಿಂದ ಪಡೆದು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಹೀಗಾಗಿ ಅರ್ಜಿದಾರರ ಮೂಲ ಕಮಲಾಪುರ ಪಟ್ಟಣ ವಾಸಿಗರಿರುವುದು ಸಹ ಕಂಡು ಬರುತ್ತದೆ. ವಾದಿಗಳ ಪರವಾಗಿ ನ್ಯಾಯವಾದಿಗಳು ಹಾಜರಿದ್ದು ಯಾವುದೇ ಲಿಖಿತ ವಾದ ಮಂಡಿಸಿರುವುದಿಲ್ಲ.

ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸುತ್ತ ವಾದಿಯ ತಾಯಿ ಗುಜರಿಬಾಯಿ ಇವರು ಪ್ರತಿವಾದಿಗಳಿಗೆ ಖಾಸಾ ಒಡಹುಟ್ಟಿದ ಅಕ್ಕನಿರುವುದಾಗಿಯೂ ಅರ್ಜಿ ಮಾಡಿಕೊಳ್ಳುತ್ತ ವಾದಿಯು

ಕಮಲಾಪುರದಲ್ಲಿ ವಾಸವಾಗಿದ್ದು ವಿವಾದಿತ ಜಮೀನನ್ನು ಪ್ರತಿವಾದಿಗಳಿಗೆ ಸ್ವಾಧೀನ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಭೂಮಿಯು ತಮ್ಮ ಸ್ವಾಧೀನ ಇರುವುದಾಗಿ ತಿಳಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಇವರು ಹೊಸಪೇಟೆ ತಾಲೂಕು ಕಮಲಾಪುರ ಪಟ್ಟಣ ವಾಸಿಗರಾಗಿದ್ದು ಮತ್ತು ವಂಶವೃಕ್ಷಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಸರಿ ಎಂಬುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ಈ ಮೇಲಿ ವಾಸ್ತವಾಂಶ ಹಾಗೂ ದಾಖಲೆಗಳ ಆಧಾರವಾಗಿ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಜಿ.ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 95/1 ಪೈಕಿ ವಿಸ್ತೀರ್ಣ 3-47 ಎಕರೆ ಜಮೀನಿಗೆ ಪವತಿ ಹಕ್ಕು ಬದಲಾವಣೆಗಾಗಿ ವಾದಿಯು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಿ ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಉಪ ತಹಶೀಲ್ದಾರರು,
ಹಂಪಸಾಗರ.

**ಪ್ರತಿಯನ್ನು :-**

1) ವಾದಿ + ಪ್ರತಿವಾದಿಗಳು
2) ಪ್ರಕರಣದಲ್ಲಿನ ನ್ಯಾಯವಾದಿಗಳಿಗೆ
3) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
4) ಹೆಚ್ಚುವರಿ ಪ್ರತಿ ಕಡತಕ್ಕೆ